ಅಧ್ಯಕ್ಷರು : ಈಗಾಗಲೇ ಒಂದೂವರೆ ಗಂಟೆಯಾಯಿತು. ಮಾನ್ಯ ಮಾಧುಸ್ವಾಮಿಯವರೆ, ನಿಮಗೆ ಇನ್ನೂ ಎಷ್ಟು ಕಾಲ ಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ನನಗೆ ಮಾತನಾಡಲು ಇನ್ನೂ ಟೈಮ್ ಬೇಕು. ಊಟ ಮಾಡಿ ಬಂದು ಮಾತನಾಡುತ್ತೇನೆ ಸಾರ್.

ಅಧ್ಯಕ್ಷರು : ಊಟ ಮಾಡಿ ಬಂದು ಮಾತನಾಡುತ್ತೀರಾ? ಈಗ ಸುಸ್ತಾಗಿದ್ದೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು.

ಅಧ್ಯಕ್ಷರು : ಆಯಿತು, ತಾವು ಆಮೇಲೆ ಮಾತನಾಡುತ್ತೇನೆ ಎನ್ನುವುದಾದರೆ ಆಮೇಲೆಯೇ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆಯಿತು ಸಾರ್. ಊಟ ಮಾಡಿ ಬಂದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಜೀವಿಜಯರಿಗೆ ಅತಿ ಮುಖ್ಯವಾದ ವಿಚಾರವೊಂದನ್ನು ಪ್ರಸ್ತಾಪಿಸಲು ಬೆಳಿಗ್ಗೆಯೇ ಅವಕಾಶ ಕೊಡಬೇಕಾಗಿತ್ತು. ನಮ್ಮ ರೈತರನ್ನು ಕೆಲವು ಗೊಬ್ಬರ ಕಂಪೆನಿಗಳು ಲೂಟಿ ಮಾಡುತ್ತಿವೆ ಎಂದು ಅವರು ಸ್ಯಾಂಪಲ್‌ವೊಂದನ್ನು ತಂದಿದ್ದರು. ಜೇಡಿ ಮಣ್ಣನ್ನು ಹೇಗೆ ಗೊಬ್ಬರವನ್ನಾಗಿ ಮಾಡಿದ್ದಾರೆ ಎಂದು ಅವರು ನನಗೆ ತೋರಿಸಿದರು. ಮಾನ್ಯ ಜೀವಿಜಯರವರೆ, ಅದರ ಬಗ್ಗೆ ತಾವು ಈಗ ಪ್ರಸ್ತಾಪಿಸಿ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಕೋಟ್ಯಂತರ ರೂಪಾಯಿಗಳ ಅವ್ಯವಹಾರವಾಗಿದೆ, ಲೂಟಿ ಮಾಡುತ್ತಿದ್ದಾರೆ ಎಂದು ಹೇಳಿದಿರಿ, ಅದರ ಬಗ್ಗೆ ಈಗ ಪ್ರಸ್ತಾಪಿಸಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸೋಮವಾರ ಪೇಟೆ ತಾಲ್ಲೂಕಿನಲ್ಲಿ ನಕಲಿ ರಸಗೊಬ್ಬರದ ಮಾರಾಟ ಜಾಲ ಕಾರ್ಯನಿರ್ವಹಿಸುತ್ತಿರುವ ಕುರಿತು.

ಶ್ರೀ ಬಿ.ಎ. ಜೀವಿಜಯ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೆ, ನನಗೆ ಅತ್ಯಂತ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನನ್ನ ಸೋಮವಾರಪೇಟೆ ಕ್ಷೇತ್ರದಲ್ಲಿ ಈಗ ಪ್ರಾಯಶಃ ಬರೇ ಸೋಮವಾರಪೇಟೆ ಒಂದೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ನಕಲಿ ರಸಗೊಬ್ಬರವನ್ನು ಈಗ ಮಾರಾಟ ಮಾಡುತ್ತಿದ್ದಾರೆ. ಇದು ಬಹಳ ಗಂಭಿರವಾದಂತಹ ಸಮಸ್ಯೆಯಾಗಿದೆ. ಇದು ರೈತರ ಬದುಕಿಗೆ ಆಘಾತವನ್ನು ಉಂಟು ಮಾಡತಕ್ಕಂಥ ಮತ್ತು ಅವರ ಜೀವನದ ಭವಿಷ್ಯವನ್ನು ಮಾರಣ ಹೋಮ ಮಾಡತಕ್ಕಂಥ ಒಂದು ಕೃತ್ಯ ಆಗಿ ಹೋಗಿ ಬಿಟ್ಟಿದೆ. ಈ ರಾಜ್ಯದಲ್ಲಿ ಯಾವ ರೀತಿಯಲ್ಲಿ ನಕಲಿ ಛಾಪಾ ಕಾಗದದ ಹಗರಣವಾಯಿತೋ, ಅದೇ ರೀತಿಯಲ್ಲಿ ಈ ನಕಲಿ ರಸಗೊಬ್ಬರದ ಜಾಲ ಈ ಕೊಡಗಿನಲ್ಲಿ ಮಾತ್ರವಲ್ಲ ಹಾಸನ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ ಮತ್ತಿತರ ರಾಜ್ಯದ ಎಲ್ಲಾ ಜಿಲ್ಲೆಗಳದಾದ್ಯಂತ

ಆಗುತ್ತಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ಕೊಡಗಿನಲ್ಲಿ ವ್ಯಾಪಕವಾಗಿ ಮಳೆಗಾಲ ಪ್ರಾರಂಭವಾಗಿದೆ. ರೈತರೆಲ್ಲಾ ತಮ್ಮ ಕೃಷಿ ಚಟುವಟಿಕೆಗಳಲ್ಲಿ ತಲ್ಲೀನರಾಗಿದ್ದಾರೆ. ಇಲ್ಲಿ ಭತ್ತ, ಶುಂಠಿ ಮತ್ತು ಜೋಳವೆಲ್ಲಾ ಬಿತ್ತನೆ ಮಾಡುತ್ತಿದ್ದಾರೆ. ಶುಂಠಿ ಬೆಳೆ ಕೂಡ ಈಗಾಗಲೇ ಬರುತ್ತಿದೆ. ಇದಕ್ಕಾಗಿ ರಸಗೊಬ್ಬರವನ್ನು ತಂದ ಅವರು ಅದನ್ನು ಗೊಬ್ಬರವೆಂದೇ ಭಾವಿಸಿ ಹಾಕಿದ್ದರು. ಮಳೆ ಬೀಳುತ್ತಿದ್ದಾಗ ಗೊಬ್ಬರವನ್ನು ತಂದ ಅವರು ಅದನ್ನು ಗೊಬ್ಬರವೆಂದೇ ಭಾವಿಸಿ ಹಾಕಿದ್ದರು. ಮಳೆ ಬೀಳುತ್ತಿದ್ದಾಗ ಗೊಬ್ಬರವನ್ನು ಹಾಕಿದರೆ, ಅದು ಅಸಲಿ ಗೊಬ್ಬರವಾಗಿದ್ದರೆ, ಅದು ಒಂದೆರಡು ಗಂಟೆಯೊಳಗಾಗಿ ಕರಗಿ ಹೋಗಬೇಕಾಗಿತ್ತು. ಆದರೆ ಆ ಗೊಬ್ಬರ ನಕಲಿ ರಸಗೊಬ್ಬರ ಎಂದು ರೈತರು ಕಂಡು ಹಿಡಿದರು. ರೈತರು ಅದು ರಸಗೊಬ್ಬರವೆಂದಲ್ಲ, ಅದನ್ನು ಫ್ಯಾಕ್ಟಂಫಾಸ್ ಎಂದು ತೆಗೆದುಕೊಂಡಿದ್ದರು. 20:20:00:30 ಫ್ಯಾಕ್ಟಂಫಾಸ್ ಎಂದು ಅವರು ಇದನ್ನು ತೆಗೆದುಕೊಂಡಿದ್ದರು. ಆದರೆ 28ನೇ ತಾರೀಖಿನಲ್ಲಿ ನನ್ನ ತಾಲ್ಲೂಕಿನ ಅಳವಾರು ಗ್ರಾಮದಲ್ಲಿ ರೈತರು ಈ ಗೊಬ್ಬರವನ್ನು ಹಾಕಿದಾಗ, ಮಳೆ ನಿರಂತರವಾಗಿ ಬೀಳುತ್ತಿದ್ದರೂ ಕೂಡ, ಈ ಗೊಬ್ಬರ ಕರಗಲಿಲ್ಲ. ಅವರಿಗೆ ಸಂಶಯ ಬಂದಿತು. ಅದನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿದಾಗ, ಅದು ಮಣ್ಣು ಎನ್ನುವುದು ಅವರಿಗೆ ಗೊತ್ತಾಯಿತು. ಅದು ಜೇಡಿಮಣ್ಣಾಗಿತ್ತು. ಆ ಸಂದರ್ಭದಲ್ಲಿ ಮತ್ತೊಂದು ಲಾರಿ ಅಲ್ಲಿಗೆ ಬಂದಿತು. ಆ ಲಾರಿಯನ್ನು ಹಿಡಿದು, ಅದರಲ್ಲಿ ಇದ್ದದ್ದನ್ನು ನೀರಿಗೆ ಹಾಕಿ ನೋಡಿದಾಗ, ಅದನ್ನು ಕರಗಿಸಿದಾಗ, ಅದು ಬರೀ ಮಣ್ಣು ಆಗಿತ್ತು. ಅದನ್ನು ನಾನು ಇಲ್ಲಿಗೆ ತಂದಿದ್ದೇನೆ. ತಾವು permission ಕೊಟ್ಟರೆ ನಾನು ಅದನ್ನು .....

ಅಧ್ಯಕ್ಷರು : ಮಾನ್ಯ ಜೀವಿಜಯರವರೆ, ತಾವು ಈಗಾಗಲೇ ಅದನ್ನು ನನ್ನ ಗಮನಕ್ಕೆ ತಂದಿದ್ದೀರಿ. ಮಾನ್ಯ ಕೃಷಿ ಸಚಿವರು ಸದನದಲ್ಲಿದ್ದಾರೆ. ನೀವು ನನ್ನ ಛೇಂಬರ್‌ನಲ್ಲಿ ಅವರಿಗೆ ಅದು ಹೇಗೆ ಜೇಡಿ ಮಣ್ಣು ಎಂದು demonstrate ಮಾಡಬಹುದು. ಮಾನ್ಯ ಸಚಿವರು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಎ. ಜೀವಿಜಯ : ಒಂದು ಲಾರಿ ಸಿಕ್ಕಿದೆ. ಅದನ್ನು ಪೊಲೀಸ್‌ನವರು investigation ಮಾಡುತ್ತಿದ್ದಾರೆ. ಕೊಡಗಿನ SP ಮತ್ತು Deputy Superintendent of Police ಅವರು ಅದರ ಬಗ್ಗೆ investigation ಮಾಡುತ್ತಿದ್ದಾರೆ. ಒಟ್ಟು ನಾಲ್ಕು ಲಾರಿ ಅಲ್ಲಿ ಸಿಕ್ಕಿದೆ.....

ಅಧ್ಯಕ್ಷರು : ನಿಮ್ಮ prayer ಏನು ಎಂಬುದನ್ನು ಹೇಳಿಬಿಡಿ.

ಶ್ರೀ ಬಿ.ಎ. ಜೀವಿಜಯ : ಒಟ್ಟು 25 ಲಾರಿಗಳ ರೋಡ್ ಗೊಬ್ಬರ ಸಿಕ್ಕಿದೆ. ಅದನ್ನು investigation ಮಾಡುತ್ತಿದ್ದಾರೆ. ಪಕ್ಕದ ಜಿಲ್ಲೆಯ ತಿಪಟೂರಿಗೆ ಹೋಗಿದ್ದಾರೆ. ತಿಪಟೂರು ಜಿಲ್ಲೆಗೆ ಹೋಗಿ ಇದನ್ನು investigation ಮಾಡುವಂತಹ ಸಂದರ್ಭದಲ್ಲಿ, ರಾಜಕಾರಣಿಗಳು ಇದರಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಇದನ್ನು ನಿಲ್ಲಿಸಬೇಕು ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಎಲ್ಲದರ ಹಿಂದೆ ರಾಜಕಾರಣಿಗಳು ಇರುತ್ತಾರೆ, ಅದರಲ್ಲೇನೂ ಅನುಮಾನ ಇಲ್ಲ. ಅದನ್ಯಾಕೆ ಇಲ್ಲಿ ಹೇಳುತ್ತೀರಿ?

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದು ರೈತರ ಜೀವನದ ಸಮಸ್ಯೆ. ಇದನ್ನು ಯಾರೂ ಕೂಡ ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಈ ದೇಶದಲ್ಲಿ ಎಂಥೆಂಥ ಜನಗಳಿದ್ದಾರೆ ಎಂದು ನಾವು ಭಾವಿಸಬೇಕಾಗುತ್ತದೆ. ಇಂತಹ ಒಂದು ದುಷ್ಕೃತ್ಯವನ್ನು ರಕ್ಷಣೆ ಮಾಡಲಿಕ್ಕೆ ಹೊರಟಿರುವಂತಹ ರಾಜಕಾರಣಿಗಳು.....

ಅಧ್ಯಕ್ಷರು : ಸಂಕ್ಷಿಪ್ತವಾಗಿ ಮುಗಿಸಿಬಿಡಿ. ಕೆಲವು ಪ್ರಭಾವಿ ವ್ಯಕ್ತಿಗಳು ಆ ತನಿಖೆಯನ್ನು ತಡೆಯುವುದಕ್ಕೆ, ಮುಚ್ಚಿ ಹಾಕುವುದಕ್ಕೆ, ಅವರಿಗೆ ರಕ್ಷಣೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ತಾನೇ ತಾವು ಆಪಾದನೆ ಮಾಡುತ್ತಿರುವುದು? ಅದನ್ನು ಹೇಳಿ.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ಈಗ ತಾವು ನನಗೊಂದು ಅವಕಾಶವನ್ನು ಮಾಡಿಕೊಡಬೇಕು. ಈಗ ನನ್ನ ಹತ್ತಿರ ಈ ನಕಲಿ ಮತ್ತು ನಿಜವಾದ ರಸಗೊಬ್ಬರ ಪ್ಯಾಕೇಟ್‌ನ ಸ್ಯಾಂಪಲ್‌ಗಳಿದೆ. ಅದನ್ನು ಇಲ್ಲಿ ಪ್ರದರ್ಶನ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ನಾನು ಸದನಕ್ಕೆ ತರಲಿಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿದಾಗ, ಅದನ್ನು ಸದನಕ್ಕೆ ತರಲಿಕ್ಕೆ ಸಾಧ್ಯವಿಲ್ಲವೆಂದು ನೀವು ಹೇಳಿದ್ದೀರಿ.....

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕೃಷಿ ಮಂತ್ರಿಗಳು ನನ್ನ ಛೇಂಬರ್ಸ್‌ಗೆ ಕರೆಸುತ್ತೇನೆ. ತಾವು ಅಲ್ಲಿ ಪ್ರದರ್ಶನ ಮಾಡಬಹುದು.

ಶ್ರೀ ಬಿ.ಎ. ಜೀವಿಜಯ : ಸನ್ಮಾನ್ಯ ಅಧ್ಯಕ್ಷರೇ, Agriculture Minister ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು, ಪ್ರೆಸ್‌ನವರೆಲ್ಲಾ ಅದನ್ನು ನೋಡಬೇಕಾಗುತ್ತದೆ. ಇಂತಹ ಒಂದು ದುಷ್ಕೃತ್ಯವನ್ನು.....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ್ದು. ಅದನ್ನು ಸದನಕ್ಕೆ ತರಲಿಕ್ಕೆ ಸ್ವಲ್ಪ ತಾವು ಪರ್ಮಿಷನ್ ಕೊಡಬೇಕು. ಅದನ್ನೆಲ್ಲರೂ ನೋಡಲಿ. ಅದರಿಂದ ತಪ್ಪೇನೂ ಆಗುವುದಿಲ್ಲ.

ಅಧ್ಯಕ್ಷರು : ನನ್ನ ಛೇಂಬರ್ಸ್‌ನಲ್ಲೇ ಪ್ರದರ್ಶಿಸಬಹುದು. ಸದನ ಎಲ್ಲಾ ಒಪ್ಪುವುದಾದರೆ; ಅವರೇನು ಹೇಳುತ್ತಾರೆ ಎಂದರೆ, ನೀರಿನೊಳಗಡೆ ಹಾಕಿದರೆ, ಕಲೆಸಿದರೆ ಅದು ಜೇಡಿ ಮಣ್ಣಾಗುತ್ತದೆ ಎಂದು Demonstration ಮಾಡಲಿಕ್ಕೆ ಇಡೀ ಸದನ ಒಪ್ಪಿದರೆ ನನ್ನದೇನೂ ಅಡ್ಡಿಯಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಅವರು ತಂದು ತೋರಿಸಲಿ, ಅದಕ್ಕೆ ತಾವು ದಯವಿಟ್ಟು ಪರ್ಮಿಷನ್ ಕೊಡಿ.

(ಗೊಂದಲ)

ಅಧ್ಯಕ್ಷರು : ಸಂಪ್ರದಾಯದ ಪ್ರಕಾರ ಸದನದಲ್ಲಿ ಆ ರೀತಿ ಮಾಡಲಿಕ್ಕೆ ಅವಕಾಶ ಇಲ್ಲ. ಅದಕ್ಕೆ ನನ್ನ ಛೇಂಬರ್‌ನಲ್ಲಿ ಬಂದು, ಮುಖ್ಯಮಂತ್ರಿಗಳಿದ್ದಾರೆ, ವಿರೋಧಪಕ್ಷದ ನಾಯಕರಿದ್ದಾರೆ. ಆ ಇಲಾಖಾ ಸಚಿವರಿದ್ದಾರೆ, ನೀವೆಲ್ಲಾ ನೋಡಿ ಎಂದು ಹೇಳಿದ್ದು, ಸದನ ಒಪ್ಪಿದರೆ ಆಗಬಹುದು, ಇಲ್ಲದಿದ್ದರೆ ಅಲ್ಲಿ ಡೆಮಾನ್‌ಸ್ಟ್ರೇಟ್ ಮಾಡಿ.

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ಇದು ದಂಧೆಯಾಗಿಬಿಟ್ಟಿದೆ. ಕೇವಲ ಸೋಮವಾರಪೇಟೆಗೆ ಸೀಮಿತವಾಗಿಲ್ಲ.

ಶ್ರೀ ಆಂಜನಮೂರ್ತಿ : ರೈತರ ಹಿತದೃಷ್ಟಿಯಿಂದ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಎ. ಜೀವಿಜಯ : ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಬೇಕು, ಇದನ್ನು ದಂಧೆಯಲ್ಲಿ ಯಾರು ಮಾಡುತ್ತಿದ್ದಾರೆ, ಯಾವ ಫ್ಯಾಕ್ಟರಿ ಎಲ್ಲಿದೆ ಎಂಬುದು ಗೊತ್ತಿಲ್ಲ, ಪಂಜಾಬ್‌ನಿಂದ ಜಿಪ್ಸಂ ತರಿಸಿದ್ದಾರೆ, ಮಣ್ಣಿಗೆ ಜಿಪ್ಸಂ ಅನ್ನು ಮಿಕ್ಸ್ ಮಾಡಿದ್ದಾರೆ, ರಸಗೊಬ್ಬರವೆಂದು ಹಂಚುತ್ತಿದ್ದಾರೆ, ಇದು ರೈತರ ಬದುಕಿನ ಪ್ರಶ್ನೆ, ಇದು ರೈತರ ಭವಿಷ್ಯವಾಗಬೇಕು? ಇವರೇನು ಮಾಡುತ್ತಾರೆ ಗದ್ದೆಯನ್ನು ಉತ್ತಿಕೊಡುತ್ತಾರೆ, ಇವರೇ ಬೀಜವನ್ನು ಕೊಡುತ್ತಾರೆ, ಬೆಳೆ ಬಂದ ಮೇಲೆ ಇವರೇ ಕುಯ್ದುಬಿಟ್ಟು 5 ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೆ, ಮಾನ್ಯ ಜೀವಿಜಯರವರು ತಮಗೆ, ಭೇಟಿ ಮಾಡಿ ಹೇಳಿದ್ದಾರೆ, ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದಾರೆ, ತಾವು ಇಲ್ಲಿಯಾದರೂ ಅವಕಾಶ ಕೊಡಿ, ಇಲ್ಲವಾದರೆ ಮುಖ್ಯಮಂತ್ರಿಗಳ ಛೇಂಬರ್‌ನಲ್ಲಿ ಎಲ್ಲರೂ ಬಂದು ಡೆಮಾನ್‌ಸ್ಟ್ರೇಟ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸರಿಯಾಗಿ ಮಾನ್ಯ ಸದಸ್ಯರು ಹೇಳುತ್ತಾರೆ. ಕಷ್ಟಪಟ್ಟು ಇವತ್ತು ರೈತರ ಬಗ್ಗೆ ಸಲಹೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಆಯಿತು, ನಮ್ಮ ಟೀ ರೂಂನಲ್ಲೇ ಡೆಮಾನ್‌ಸ್ಟ್ರೇಟ್ ಮಾಡಲಿ. ಮುಖ್ಯಮಂತ್ರಿಗಳು, ತಾವು, ಕೃಷಿ ಸಚಿವರು, ಎಲ್ಲಾ ಲೀಡರ್‌ಗಳೆಲ್ಲಾ ಬಂದರೆ ಜಾಗ ಆಗುತ್ತದೆ.

ಶ್ರೀ ಎನ್. ಧರ್ಮಸಿಂಗ್ : ಇಲ್ಲೇ ಮಾಡಬಹುದು.

(ಗೊಂದಲ)

ಶ್ರೀ ಆಂಜನಮೂರ್ತಿ : ಇಲ್ಲೇ ಮಾಡಬಹುದು, ಎಲ್ಲಾ ಮಾನ್ಯ ಸದಸ್ಯರ ಗಮನಕ್ಕೆ ತರಲಿ, ಅದು ಬಾಂಬ್ ಅಲ್ಲ ಅಥವಾ ಆರ್‌ಡಿಎಕ್ಸ್ ಪೌಡರಲ್ಲ.

ಅಧ್ಯಕ್ಷರು : ತಾವು (ವಿರೋಧಪಕ್ಷದ ನಾಯಕರು) ಮೂವತ್ತು ವರ್ಷದಿಂದ ಇಲ್ಲಿದ್ದೀರಿ ಈಗ ಜೀವಿಜಯರವರೇ, ಅಲ್ಲಿ (ಟೀ ರೂಂ ನಲ್ಲಿ) ಡೆಮಾನ್‌ಸ್ಟ್ರೇಟ್ ಮಾಡಿ, ಎಲ್ಲಾ ನಾಯಕರು ಬರಲಿ, I will request the press people also ನೋಡಲಿ.

ಶ್ರೀ ಬಿ.ಎ. ಜೀವಿಜಯ : ನಾನು ಇಲ್ಲೇ ಡೆಮಾನ್‌ಸ್ಟೇಟ್ ಮಾಡುತ್ತೇನೆ.

ಮಾನ್ಯ ಸದಸ್ಯರೊಬ್ಬರು : ನಮಗೆಲ್ಲಾ ಗೊತ್ತಾಗಬೇಕು, ನಮ್ಮ ಎದುರಿಗೆ ಮಾಡಿ, ಕ್ಯಾಬಿನ್‌ನಲ್ಲಿ ಮಾಡಿದರೆ ನಮಗೆ ಗೊತ್ತಾಗುವುದಿಲ್ಲ, ರೈತರ ಪ್ರಶ್ನೆ, ಇಡೀ ರಾಜ್ಯಕ್ಕೆ ಗೊತ್ತಾಗಲಿ, ಇಡೀ ರಾಜ್ಯದ ಜನತೆಗೆ ಗೊತ್ತಾಗಬೇಕು, ಇಡೀ ರಾಜ್ಯದಲ್ಲಿ ನಡೆಯುತ್ತಿರುವ ದೊಡ್ಡ ಹಗರ.

(ಗೊಂದಲ)

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ಬರೀ ಗೊಬ್ಬರವಲ್ಲ, ಬೀಜನೂ ಕಳಪೆಯದ್ದು, ವಿತರಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಜೀವಿಜಯರವರೇ, ನಮ್ಮ ಛೇಂಬರ್ ಇದೆಯಲ್ಲಾ ಅಲ್ಲಿ ಬಂದು ಡೆಮಾನ್‌ಸ್ಟೇಟ್ ಮಾಡಿ, ನಾನು ಪ್ರೆಸ್ ಪಿಪಲ್‌ಗು ಬನ್ನಿ ಎಂದು ರಿಕ್ವೆಸ್ಟ್ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಸಚಿವರು, ವಿರೋಧಪಕ್ಷದ ನಾಯಕರು, ಇತರೇ ನಾಯಕರುಗಳು ಬರಲಿ, ಈಗ ಸದನವನ್ನು ಮೂರು ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 1.45ಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 3 ಗಂಟೆ 23 ನಿಮಿಷಕ್ಕೆ ಪ್ರಾರಂಭವಾಯಿತು, ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನಲಂಕರಿಸಿದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸದನದಲ್ಲಿ ಸಚಿವರುಗಳು ಇಲ್ಲದೇ ಇರುವ ಬಗ್ಗೆ.

ಅಧ್ಯಕ್ಷರು : ಮಾಧುಸ್ವಾಮಿಯವರು .....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಯಾರಿದ್ದಾರೆ ಎಂದು ಮಾತನಾಡುವುದು?

ಶ್ರೀ ವಾಟಾಳ್ ನಾಗರಾಜ್ : ಯಾರಿಗೆ ಮಾತನಾಡಬೇಕು?

ಅಧ್ಯಕ್ಷರು : ಇದ್ದಾರಲ್ಲಾ ಆಚಾರ್ಯರವರು, ಬೇರೆಯವರು ಬರುತ್ತಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಬರುತ್ತಾರೆ ಎಂದರೆ ಯಾರಾದರೂ ಉತ್ತರನ್ನು ಮಾದುಸ್ವಾಮಿಯವರು ಮಾತನಾಡಿದ್ದಕ್ಕೆ ಕೊಡಬೆಕಲ್ಲಾ?

ಅಧ್ಯಕ್ಷರು : ಆಯಿತು, ಬರುತ್ತಾರೆ ಹೇಳಿಕಳುಹಿಸಿದ್ದೇನೆ ಆಚಾರ್ಯರವರಿಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಬ್ಬರು ಮಂತ್ರಿಗಳು, ಆರು ಜನ ಶಾಸಕರು ಆಡಳಿತ ಪಕ್ಷದವರು ಇದ್ದಾರೆ. ಯಾರ ಪರವಾಗಿ ನಾವು ಮಾತನಾಡಬೇಕು ಹೇಳಿ.

ಶ್ರೀ ಎ. ಸುನಿಲ್ ಕುಮಾರ್ : ಇಲ್ಲಿ ಇದ್ದೇವೆ.....

ಶ್ರೀ ವಾಟಾಳ್ ನಾಗರಾಜ್ : ಅಲ್ಲಿದ್ದೀರಾ?